# ಪಾಪರ್ ಬೆಕರ್

ಒಂದು ಕಾಲದಲ್ಲಿ ಜಾಗತಿಕ ಟೆನಿಸ್ ಲೋಕದಲ್ಲಿ ಲಕ್ಷಾಂತರ ಜನರು ಕಣ್ಣರಳಿಸಿ ನೋಡುತ್ತಿದ್ದ ಅದ್ಭುತ ಆಟಗಾರ ವಿಶ್ವಚಾಂಪಿಯನ್– ಬೋರಿಸ್ ಬೆಕರ್. 1985ರಲ್ಲಿ ಮೊತ್ತಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಾಗ ಜರ್ಮನಿಯ ಈ ತರುಣನಿಗೆ 17ರ ಹರೆಯ. ವಿಂಬಲ್ಡನ್‌ನಲ್ಲಿ ಪುರುಷರ ಸಿಂಗಲ್ಸ್ ಚಾಂಪಿಯನ್‌ಶಿಪ್ ಗೆದ್ದುಕೊಂಡ 'ಜಗತ್ತಿನ ಅತಿ ಕಡಿಮೆ ವಯಸ್ಸಿನ ಟೆನಿಸಿಗ' ಎನ್ನುವ ಖ್ಯಾತಿ ಈಗಲೂ ಈತನ ಹೆಸರಲ್ಲೇ ಇದೆ. ವೃತ್ತಿಜೀವನದಲ್ಲಿ ಒಟ್ಟು 6 ಗ್ರ್ಯಾಮ್‌ಸ್ಲಾಮ್ ಟ್ರೋಫಿಗಳನ್ನು ಗೆದ್ದುಕೊಂಡ ಬೆಕರ್, ಟೆನಿಸ್ ಅಂಕಣದಲ್ಲೇ ಗಳಿಸಿದ ಒಟ್ಟು ಆದಾಯ 173 ಕೋಟಿ ರೂಪಾಯಿ! ಆದರೆ ಇದೀಗ ಈತ 'ಪಾಪರ್' ಆಗಿದ್ದಾನೆ! 51ರ ಇಳಿವಯಸ್ಸಿನಲ್ಲಿ ಬೆಕರ್, ಕೋರ್ಟ್‌ನ ಮುಂದೆ ಕೈಕಟ್ಟಿ ನಿಂತಿದ್ದಾನೆ. ಮೈಮೇಲೆ ಮಣಭಾರ ಹೇರಿಕೊಂಡಿರುವ ಸಾಲಗಳನ್ನು ತೀರಿಸಲು ತಾನು ಗೆದ್ದ ಎಲ್ಲ ಟ್ರೋಫಿಗಳನ್ನೂ, ಖರೀದಿಸಿದ ಮನೆ, ಆಸ್ತಿಗಳನ್ನೂ ಬಿಕರಿಗಿಟ್ಟಿದ್ದಾನೆ.

ಎರಡು ವರ್ಷಗಳ ಹಿಂದೆಯೇ ಬೋರಿಸ್ ಬೆಕರ್ ತಾನು ದಿವಾಳಿಯಾಗಿದ್ದೇನೆ ಎಂದು ಘೋಷಿಸಿದ್ದ. ಸಾಲಗಾರರ ಕಾಟದಿಂದ ತಪ್ಪಿಸಿಕೊಳ್ಳಲು ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್ ಎಂಬ ಪುಟ್ಟ ದೇಶದಲ್ಲಿ ರಾಜಕೀಯ ಆಶ್ರಯ ಕೋರಿದ್ದ. 1960ರಲ್ಲಿ ಫ್ರಾನ್ಸ್‌ನಿಂದ ಬೇರೆಯಾದ ಈ ಪುಟ್ಟ ದೇಶ ವಜ್ರ, ಚಿನ್ನ, ಯುರೇನಿಯಂ ಮುಂತಾದ ಖನಿಜಗಳುಳ್ಳ ಶ್ರೀಮಂತ ದೇಶ. ಆದರೆ ಅಲ್ಲಿರುವವರೆಲ್ಲ ಬಡವಾತಿ ಬಡವರು. ಆದರೆ ಆ ದೇಶ ಈತನಿಗೆ ಆಶ್ರಯ ಕೊಡಲು ಒಪ್ಪಲಿಲ್ಲ. ಕೊನೆಗೆ 2018ರ ಡಿಸೆಂಬರ್‌ನಲ್ಲಿ 'ಸಾಲ ತೀರಿಸುವುದರಿಂದ ವಿನಾಯ್ತಿ ಕೋರಿ' ಬ್ರಿಟನ್ ನ್ಯಾಯಾಲಯದ ಮೊರೆಹೊಕ್ಕ. ಟೆನಿಸ್ ಅಂಕಣದಲ್ಲಿ ಆತ ವಿಜೃಂಭಿಸಿ ಗೆದ್ದ ಎಲ್ಲ ಕೊಡುಗೆ, ಪದಕಗಳನ್ನು ಈಗ ಏಲಂಗೆ ಇಡಲಾಗಿದೆ.



ಇಷ್ಟೊಂದು ಕೋಟಿಗಟ್ಟಳೆ ಹಣ ದುಡಿದ ಕ್ರೀಡಾತಾರೆಯೊಬ್ಬ ಅದು ಹೇಗೆ ಪಾಪರ್ ಆದ? ಇದು ದಿನರಾತ್ರಿ ಕಳೆಯುವುದರೊಳಗೆ ಆದ ವಿದ್ಯಮಾನವಲ್ಲ. ವರ್ಷಾನುಗಟ್ಟಳೆ ಐಷಾರಾಮದ ಜೀವನಶೈಲಿಯ ಫಲಶ್ರುತಿ. ಐಷಾರಾಮದ ಜೀವನಕ್ಕೆಂದೇ ಕಂಡಕಂಡಲ್ಲಿ ಸಾಲ ಮಾಡಿದ. ಎಷ್ಟು ಸಾಲ ಮಾಡಿದನೆಂದರೆ ಇರುವ ಆಸ್ತಿಗಳೆಲ್ಲವನ್ನು ಮಾರಿದರೂ ಅದು ತೀರುವುದಿಲ್ಲ ಎನ್ನುವಷ್ಟು! ಈ ಹಂತದಲ್ಲಿ ಆತ ಹೊಂದಿದ್ದ ಸುಮಾರು 82ರಷ್ಟು ಬೆಲೆ ಬಾಳುವ ಟ್ರೋಫಿಗಳು, ಅಮೂಲ್ಯ ಕೊಡುಗೆಗಳನ್ನೆಲ್ಲ ಆನ್‌ಲೈನ್‌ನಲ್ಲಿ ಹರಾಜು ಹಾಕಲು ಕೋರ್ಟ್ ನಿರ್ಧರಿಸಿತು. ಆದರೆ ಬೆಕರ್ ಅದಕ್ಕೆ ತಡೆಯಾಜ್ಞೆ ತಂದ. 'ಬ್ರಿಟನ್ನಿನ ದಿವಾಳಿ ಕಾಯ್ದೆಯ ಪ್ರಕಾರ ತೀರಾ ವೈಯಕ್ತಿಕವಾದ ಐಟಂಗಳನ್ನು ಏಲಂ ಮಾಡುವಂತಿಲ್ಲ' ಎನ್ನುವುದು ಬೆಕರ್ ಪರ ವಕೀಲರ ವಾದವಾಗಿತ್ತು. ಈಗ ಕಳೆದ ವಾರ ಬೆಕರ್ ತಾನು ತಂದಿದ್ದ ತಡೆಯಾಜ್ಞೆಯನ್ನು ಹಿಂದಕ್ಕೆ ಪಡೆದಿದ್ದಾನೆ. ಹರಾಜು ಕೂಗುವ ಸಂಸ್ಥೆ ವೈಲ್ಸ್ ಹಾರ್ಡಿ 'ಬನ್ನಿ ಜನರೇ ಬನ್ನಿ. ಅತ್ಯಂತ ಅಪರೂಪದ ಅವಕಾಶವಿದು. ವಿಶ್ವಚಾಂಪಿಯನ್ ಒಬ್ಬರ ವೈಯಕ್ತಿಕ ಸೊತ್ತುಗಳನ್ನು ನೀವು ಖರೀದಿಸಬಹುದು' ಎಂದು ಆಹ್ವಾನ ನೀಡಿದೆ. ಬೆಕರ್‌ನ ಅಭಿಮಾನಿಗಳು ಮತ್ತು ಸಾಲ ನೀಡಿದ ಕೆಲವರು ಈ ಹರಾಜಿನಲ್ಲಿ ಭಾಗವಹಿಸಲು ಉತ್ಸುಕತೆ ತೋರಿದ್ದಾರೆ. ಹರಾಜಾಗುವ ಐಟಂಗಳಲ್ಲಿ 2018ರ ಮಾಂಟೆ ಕಾರ್ಲೊ ಮಾಸ್ಟರ್ಸ್ ಟೂರ್ನಿಯ ಸಂದರ್ಭದಲ್ಲಿ ಬೆಕರ್‌ಗೆ ಕೊಡುಗೆಯಾಗಿ ಬಂದ 'ಇಂಟರ್‌ನ್ಯಾಷನಲ್ ಟೆನಿಸ್ ಹಾಲ್ ಆಫ್ ಫೇಮ್' ಚಿನ್ನದ ಉಂಗುರ, ಆತ ಬಳಸಿದ ಸಾಕ್ಸ್, ರಿಸ್ಟ್ ಬ್ಯಾಂಡ್, ಸಹಿ ಹಾಕಿದ ಕೊಡುಗೆಗಳು, ಟ್ರ್ಯಾಕ್ ಸೂಟ್, 1992ರ ಬಾರ್ಸಿಲೊನಾ ಒಲಿಂಪಿಕ್ಸ್‌ನಲ್ಲಿ ಪಡೆದ ಸರ್ಟಿಫಿಕೇಟ್ ಕೂಡಾ ಸೇರಿವೆ.

ಬೀಚಿಯವರು ಒಂದು ಮಾತು ಬರೆದಿದ್ದಾರೆ: 'ಹೆಣ್ಣಿನ ಮುಖವೇ ಪುಸ್ತಕವಾದವನಿಗೆ ಹುಚ್ಚಾಸ್ಪತ್ರೆಯೇ ವಿಶ್ವವಿದ್ಯಾನಿಲಯ' ಎಂದು. ಬೋರಿಸ್ ಬೆಕರ್ ಕಥೆಯೂ ಅದೇ ಎನ್ನುತ್ತಿದೆ ಇತಿಹಾಸ. ಖ್ಯಾತಿಯ ಉತ್ತುಂಗಕ್ಕೇರಿದ ಬಳಿಕ ಆತನಿಗೆ ಒಲಿದು ಬಂದ ಹೆಣ್ಣುಗಳಿಗೆ ಲೆಕ್ಕವಿಲ್ಲ. ಈತ ಕೂಡಾ ತನ್ನ ರೊಮ್ಯಾನ್ಸ್‌ಗಾಗಿ ಧಾರಾಳ ಖರ್ಚು ಮಾಡಿದ. ಒಂದಿಬ್ಬರನ್ನು ಮದುವೆಯಾದ. ಆದರೆ ಭಗ್ನಪ್ರೇಮ, ಡೈವೋರ್ಸ್ ಎಲ್ಲವೂ ಬೆಕರ್‌ಗೆ ದುಬಾರಿಯಾಗಿ ಪರಿಣಮಿಸಿದವು. ಆತನ ಆರೋಗ್ಯ ಕೂಡಾ ಕೈಕೊಟ್ಟಿತು. ಭಾರೀ ಹಣ ಹೂಡಿ ಶುರು ಮಾಡಿದ ಕೆಲವು ಬಿಸಿನೆಸ್‌ಗಳಲ್ಲಿ ದೊಡ್ಡ ನಷ್ಟ ಅನುಭವಿಸಿದ. ಈತ ಆರಂಭಿಸಿದ ಇಂಟರ್‌ನೆಟ್ ಆರ್ಗಾನಿಕ್ ಆಹಾರ ಕಂಪನಿ ಮತ್ತು ದುಬೈನಲ್ಲಿ ಕಟ್ಟಿಸಿದ ಬೆಕರ್ ಟವರ್ ಎರಡೂ ಕೈಕಚ್ಚಿದವು. ಈಗ ಎಲ್ಲವನ್ನೂ ಕಳೆದುಕೊಂಡು ಪಾಪರ್ ಆಗಿರುವ ಹೊತ್ತಿನಲ್ಲಿ ಆತನ ಎರಡನೇ ಹೆಂಡತಿ, ಹಾಲೆಂಡಿನ ಮಾಡೆಲಿಂಗ್ ಬೆಡಗಿ ಶಾರ್ಲೇ ಲಿಲ್ಲೀ ಕೆಸೆನ್‌ಬರ್ಗ್ ಕೂಡಾ ಡೈವೋರ್ಸ್ ನೀಡುವುದು ಖಚಿತವಾಗಿದೆ. ಮೊದಲ ಹೆಂಡತಿ ಹಾಕಿದ ಕೇಸ್‌ನಲ್ಲಿ 5.7 ಲಕ್ಷ ಡಾಲರ್ ಪರಿಹಾರ ನೀಡುವುದು ಇನ್ನೂ ಬಾಕಿ ಇದೆ. ಬೆಕರ್ ಎಲ್ಲಿಯವರೆಗೆ ಸಾಲ ಮಾಡಿದ್ದಾನೆಂದರೆ, ಆತನ ಐಷಾರಾಮಿ ಬಂಗಲೆ 'ಮಲ್ಲೋರ್ಕ'ದ ಕೆಲಸ ಮಾಡಿದ ಕೆಲಸಗಾರರಿಗೂ ಕೂಲಿ ಕೊಡದೆ ಅವರು ಕೋರ್ಟ್‌ನಲ್ಲಿ ಕೇಸ್ ಹೂಡಿ ಕುಳಿತಿದ್ದಾರೆ. ಈಗ ಬೆಕರ್‌ನ ಎಲ್ಲ ಸ್ಮರಣಿಕೆಗಳನ್ನು ಹರಾಜು ಹಾಕಿದರೂ, ಒಟ್ಟು ಸಾಲ ತೀರಿಸುವಷ್ಟು ಹಣ ಹುಟ್ಟುವುದಿಲ್ಲ ಎಂದು ಹರಾಜು ಕಂಪನಿಯವರು ಸ್ಪಷ್ಟಪಡಿಸಿದ್ದಾರೆ. ಜುಲೈ 7ರವರೆಗೆ ಏಲಂ ಮುಂದುವರಿಯಲಿದೆ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65